**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು.</u>**

**<u>ಸೆಷನ್ಸ್ ಕೇಸ್ ನಂಬ್ರ 44 / 2024</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸುಜಿತ್ | <u>ಪ್ರಾಸಾಃ 7</u> |
| ತಂದೆಯ ಹೆಸರು | : | ದೇವದಾಸ್ | <u>ಚಾಸಾಃ 14</u> |
| ಪ್ರಾಯ | : | 32 ವರ್ಷ | **<u>ದಿನಾಂಕಃ 15-04-2026</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | Interior designing | |
| ವಾಸಸ್ಥಳ | : | ಕೊಲ್ಯ , ಸೋಮೇಶ್ವರ, ಮಂಗಳೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-13 ರವರು ನನ್ನ ಸ್ನೇಹಿತರು. ದಿನಾಂಕ 14.12.2023 ರಂದು ನಾನು ಮತ್ತು ಚಾಸಾ-13 ರವರು ರಾತ್ರಿ 7.30 ರ ಸಮಯಕ್ಕೆ ಉಳ್ಳಾಲ ಪೋಲಿಸ್ ಠಾಣೆಯ ಮುಂಬಾಗದಲ್ಲಿ ಹೋಗುತ್ತಿದ್ದಾಗ ಮಂಜುನಾಥ ಎನ್ನುವ ಪೋಲಿಸ್ ಸಿಬ್ಬಂದಿ ಬಂದು ನಮ್ಮನ್ನು ಮಹಜರಿಗೆ ಪಂಚರಾಗಿ ಸಹಕರಿಸುವಂತೆ ಕೋರಿದ್ದು, ನಾವು ಒಪ್ಪಿ ಸದರಿ ಠಾಣೆಯ ಒಳಗೆ ಹೋಗಿದ್ದು ಅಲ್ಲಿ ಪೋಲಿಸ್ ನಿರೀಕ್ಷಕರ ಕೊಠಡಿಗೆ ಹೋಗಿದ್ದು ಅವರು ಪ್ರಕರಣದ ಬಗ್ಗೆ ವಿವರಣೆಯನ್ನು ನೀಡಿದ್ದು, ಅಲ್ಲಿ ಚಾಸಾ-1 ರವರು ಹಾಜರಿದ್ದು, ಅವರು ನಮ್ಮ ಸಮಕ್ಷಮದಲ್ಲಿ ಘಟನೆಯಾಗುವ ಸಮಯದಲ್ಲಿ ಚಾಸಾ-1 ರವರು ಧರಿಸಿದ್ದ ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ಹಾಜರುಪಡಿಸಿದ್ದು ಅದರ ಬಲಭಾಗದಲ್ಲಿ ಒಂದು ತೂತಾಗಿದ್ದು ಮತ್ತು ರಕ್ತದ ಕಲೆಗಳು ಇದ್ದು, ಸದರಿ ರಕ್ತದ ಕಲೆಗಳು ವರುಣ್ ಗಟ್ಟಿರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಅವರ ರಕ್ತ ಚಾಸಾ-1 ರವರ ಪ್ಯಾಂಟಿಗೆ

ತಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಬಟ್ಟೆಯನ್ನು ಪೇಪರ್ ನಲ್ಲಿ ಮಡಚಿ ಬಿಳಿ ಬಟ್ಟೆಯಲ್ಲಿ ಹೊಲಿದು ಪ್ಯಾಕ್ ಮಾಡಿ ಸೀಲು ಮಾಡಿ ನನ್ನ, ಚಾಸಾ-13 ಮತ್ತು ಪೋಲಿಸ್ ನಿರೀಕ್ಷಕರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ ಕ್ರಮಸಂಖ್ಯೆ-13 ಎಂದು ಗುರುತು ನೀಡಿರುತ್ತಾರೆ. ಈ ಬಗ್ಗೆ ರಾತ್ರಿ 7.30 ರಿಂದ 8.00 ಗಂಟೆಯವರಗೆ ಮಹಜರು ತಯಾರಿಸಿದ್ದು ಸದರಿ ಮಹಜರಿಗೆ ನಾವು ಸಹಿ ಮಾಡಿರುತ್ತೇವೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಬಿ)** ಎಂದು ಗುರುತಿಸಲಾಯಿತು. ಸದರಿ ಪ್ಯಾಂಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಎಂ.ಒ-6 ರ ಪ್ಯಾಂಟನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸುತ್ತಾರೆ. ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು **ಎಂ.ಒ-6(ಬಿ)** ಎಂದು ಗುರುತಿಸಲಾಯಿತು.

2. ನಂತರ ಠಾಣೆಯ ಮುಂಬಾಗದಲ್ಲಿದ್ದಾಗ ರಾತ್ರಿ 9.15 ರ ಸಮಯಕ್ಕೆ ಮಂಜುನಾಥ ಎನ್ನುವ ಪೋಲಿಸ್ ಸಿಬ್ಬಂದಿ ಬಂದು ನಮ್ಮನ್ನು ಇನ್ನೊಂದು ಮಹಜರಿಗೆ ಪಂಚರಾಗಿ ಸಹಕರಿಸುವಂತೆ ಕೋರಿದ್ದು, ನಾವು ಒಪ್ಪಿ ಸದರಿ ಠಾಣೆಯ ಒಳಗೆ ಹೋಗಿದ್ದು ಅಲ್ಲಿ ಪೋಲಿಸ್ ನಿರೀಕ್ಷಕರ ಕೊಠಡಿಗೆ ಹೋಗಿದ್ದು ಅವರು ಪ್ರಕರಣದ ಬಗ್ಗೆ ವಿವರಣೆಯನ್ನು ನೀಡಿದ್ದು, ಅಲ್ಲಿ ಚಾಸಾ-2 ರವರು ಹಾಜರಿದ್ದು, ಅವರು ನಮ್ಮ ಸಮಕ್ಷಮದಲ್ಲಿ ಘಟನೆಯಾಗುವ ಸಮಯದಲ್ಲಿ ಚಾಸಾ-2 ರವರು ಧರಿಸಿದ್ದ ಬಿಳಿ ಮತ್ತು ಬೂದು ಬಣ್ಣದ ಉದ್ದತೋಳಿನ ಟೀ ಶರ್ಟ್ ಮತ್ತು ಸ್ಲೇಟ್ ಬಣ್ಣದ ಜೀನ್ಸ್ ಪ್ಯಾಂಟನ್ನು ಹಾಜರುಪಡಿಸಿದ್ದು ಅವುಗಳಲ್ಲಿ ರಕ್ತದ ಕಲೆಗಳು ಇದ್ದು, ಸದರಿ ರಕ್ತದ ಕಲೆಗಳು ವರುಣ್ ಗಟ್ಟಿರವರನ್ನು ಆಸ್ಪತ್ರೆಗೆ ಕರೆದುಕೊಂಡು

ಹೋಗುವಾಗ ಅವರ ರಕ್ತ ಚಾಸಾ-2 ರವರ ಬಟ್ಟೆಗಳಿಗೆ ತಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಬಟ್ಟೆಗಳನ್ನು ಪ್ರತ್ಯೇಕವಾಗಿ ಪೇಪರ್ ನಲ್ಲಿ ಮಡಚಿ ಬಿಳಿ ಬಟ್ಟೆಯಲ್ಲಿ ಹೊಲಿದು ಪ್ಯಾಕ್ ಮಾಡಿ ಸೀಲು ಮಾಡಿ ನನ್ನ, ಚಾಸಾ-13 ಮತ್ತು ಪೋಲಿಸ್ ನಿರೀಕ್ಷಕರ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ ಕ್ರಮಸಂಖ್ಯೆ-16 ಮತ್ತು 17 ಎಂದು ಗುರುತು ನೀಡಿರುತ್ತಾರೆ. ಈ ಬಗ್ಗೆ ರಾತ್ರಿ 9.15 ರಿಂದ 10.00 ಗಂಟೆಯವರಗೆ ಮಹಜರು ತಯಾರಿಸಿದ್ದು ಸದರಿ ಮಹಜರಿಗೆ ನಾವು ಸಹಿ ಮಾಡಿರುತ್ತೇವೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-8(ಬಿ)** ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಎಂ.ಒ-8 ಮತ್ತು 9 ರ ಬಟ್ಟೆಗಳನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸುತ್ತಾರೆ. ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ಎಂ.ಒ-8(ಬಿ) ಮತ್ತು 9(ಬಿ)** ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಎಂ.ಕೆ.ಆರ್ ವಕೀಲರಿಂದ</u>**

3. ನನಗೆ ವರುಣ್ ರವರನ್ನು ನೋಡಿ ಪರಿಚಯ ಇರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದೇ ದಿನ ಎರಡು ಬಾರಿಗೆ ಮೇಲೆ ಹೇಳಿದ ಮಹಜರಿನ ಸಲುವಾಗಿ ಹೋಗಿರುತ್ತೇನೆ. ನಾನು ಉಳ್ಳಾಲ ಠಾಣೆಗೆಮೇಲೆ ಹೇಳಿದಂತೆ ಹೋಗಿರುವುದಿಲ್ಲ ಮತ್ತು ನಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ವರುಣ್ ರವರು ನನಗೆ

ಆತ್ಮೀಯರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**2ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಲು ಕೋರಿದ್ದು , ಅನುಮತಿ ನೀಡಲಾಯಿತು.**

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.